ಆ) ಇಲ್ಲ

ಇ) ಪ್ರಶ್ನೆ ಉದ್ಭವಿಸುವುದಿಲ್ಲ

ಬೀದರ್‌ನಲ್ಲಿರುವ ಖಾಸಗಿ ಇಂಜಿರಿಯರಿಂಗ್ ಕಾಲೇಜುಗಳ ಬಗ್ಗೆ.

2384(3056)

ಶ್ರೀ ರಾಜೇಂದ್ರ ವರ್ಮ(ಹುಲಸೂರು): ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೀದರ್‌ನಲ್ಲಿರುವ ಖಾಸಗಿ ಇಂಜಿನಿಯರಿಂಗ್ ಕಾಲೇಜುಗಳ ಸಂಖ್ಯೆ ಎಷ್ಟು, (ಹೆಸರು ವಿವರಗಳನ್ನು ತಾಲ್ಲೂಕುವಾರು ಅಂಕಿಅಂಶಗಳಲ್ಲಿ ಒದಗಿಸುವುದು)

ಆ) ಜಿಲ್ಲೆಯಲ್ಲಿ ಕಳೆದ 3 ವರ್ಷಗಳಲ್ಲಿ ಎಷ್ಟು ಖಾಸಗಿ ಇಂಜಿನಿಯರಿಂಗ್ ಕಾಲೇಜುಗಳ ಸ್ಥಾಪನೆಗೆ ಮಂಜೂರಾತಿ ನೀಡಲಾಗಿದೆ, (ಸಂಸ್ಥೆಗಳ ಹೆಸರು ಹಾಗೂ ಆಡಳಿತ ಮಂಡಳಿ ವಿವರಗಳನ್ನು ಒದಗಿಸುವುದು)

ಇ) ಈ ಖಾಸಗಿ ಇಂಜಿನಿಯರಿಂಗ್ ಕಾಲೇಜುಗಳನ್ನು ಸ್ಥಾಪಿಸಲು ಮುಂದೆ ಬರುವವರಿಗೆ ಸರ್ಕಾರ ಯಾವ ಯಾವ ಸೌಲಭ್ಯಗಳನ್ನು ಒದಗಿಸಲಿದೆ.

ಡಾ: ಜಿ.ಪರಮೇಶ್ವರ (ಉನ್ನತ ಶಿಕ್ಷಣ ಸಚಿವರು):

ಅ) 1. ಗುರುನಾನಕ್‌ದೇವ್ ಇಂಜಿನೀಯರಿಂಗ್ ಕಾಲೇಜು, ಬೀದರ್.

2. ರೂರಲ್ ಇಂಜಿನೀಯರಿಂಗ್ ಕಾಲೇಜ್, ಬಾಲ್ಕಿ, ಬೀದರ್ ಜಿಲ್ಲೆ.

3. ಬಸವಕಲ್ಯಾಣ ಇಂಜಿನೀಯರಿಂಗ್ ಕಾಲೇಜು, ಬಸವಕಲ್ಯಾಣ, ಬೀದರ್ ಜಿಲ್ಲೆ.

ಆ) ಬಸವಕಲ್ಯಾಣ ಇಂಜಿನಿಯರಿಂಗ್ ಕಾಲೇಜು, ಬಸವಕಲ್ಯಾಣ - ಬಸವಕಲ್ಯಾಣ ಎಜುಕೇಷನ್ ಟ್ರಸ್ಟ್.

ಆಡಳಿತ ಮಂಡಳಿಯ ಸದಸ್ಯರುಗಳು:

1. ಶ್ರೀ ಬಸವರಾಜ ಪಾಟೀಲ ಅಟ್ಟೂರ್ - ಅಧ್ಯಕ್ಷರು

2. ಶ್ರೀಮತಿ ಮಲ್ಲಮ್ಮ ಪಾಟೀಲ್ ಅಟ್ಟೂರ್ - ಉಪಾಧ್ಯಕ್ಷರು

3. ಶ್ರೀ ಧನರಾಜ್ ತಾಲಮಪಳ್ಳಿ - ಕಾರ್ಯದರ್ಶಿ

4. ಶ್ರೀಮತಿ ಕಸ್ತೂರಿಬಾಯಿ - ಸದಸ್ಯರು

5. ಶ್ರೀ ಶಿವಶರಣಪ್ಪ ಪಾಟೀಲ್ - ಸದಸ್ಯರು

6. ಶ್ರೀ ಮಹಮ್ಮದ್ ಮಸ್ತಾನ್ ಸೇಠ್ - ಸದಸ್ಯರು

7. ಶ್ರೀ ಶಂಕರ್‌ರಾವ್ ಜಾನಾಪುರ - ಸದಸ್ಯರು

ಇ) ಯಾವುದು ಇಲ್ಲ.

ರಾಜ್ಯದ ಪ್ರಾಥಮಿಕ ಮತ್ತು ಪ್ರೌಢಶಾಲೆಗಳನ್ನು ನಡೆಸುವ ಖಾಸಗಿ ಸಂಸ್ಥೆಯವರಿಗೆ ಅನುದಾನ.

2386(3077)

ಶ್ರೀ ಪಿ.ಜಿ.ಆರ್.ಸಿಂಧ್ಯ (ಕನಕಪುರ): ಮಾನ್ಯ ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. ರಾಜ್ಯದಲ್ಲಿ ಪ್ರಾಥಮಿಕ : ಮಾಧ್ಯಮಿಕ ಮತ್ತು ಪ್ರೌಢಶಾಲೆಗಳನ್ನು ನಡೆಸುತ್ತಿರುವ ಖಾಸಗಿ ಶಿಕ್ಷಣ ಸಂಸ್ಥೆಗಳಿಗೆ ಶಿಕ್ಷಣ ಇಲಾಖೆ ಕೊಡುತ್ತಿರುವ ಅನುದಾನ ಎಷ್ಟು?

2. ಜಿಲ್ಲಾವಾರು ವಿವರಗಳನ್ನು ನೀಡುವುದು.

3. ಈ ಅನುದಾನವನ್ನು ನಿಲ್ಲಿಸುವ ಯೋಜನೆ ಸರ್ಕಾರದ ಮುಂದೆ ಇದೆಯೇ?

4. ಇದ್ದಲ್ಲಿ, ಅದಕ್ಕೆ ಕಾರಣಗಳೇನು? (ವಿವರಗಳನ್ನು ಕೊಡುವುದು)

ಶ್ರೀ ಹೆಚ್. ವಿಶ್ವನಾಥ್ (ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರು):

1. 2000-2001ನೇ ಸಾಲಿನಲ್ಲಿ ಖಾಸಗಿ ಅನುದಾನಿತ ಶಿಕ್ಷಣ ಸಂಸ್ಥೆಗಳಿಗೆ ಅನುದಾನಕ್ಕಾಗಿ ಒಟ್ಟು 53702.95 ಲಕ್ಷಗಳ ಆಯವ್ಯಯ ಒದಗಿಸಲಾಗಿದೆ.

2. ಅನುಬಂಧ - 1 ಅ ದಲ್ಲಿ ಲಗತ್ತಿಸಿದೆ.

3. ಇಲ್ಲ.